ಕರ್ನಾಟಕ ಸರ್ಕಾರ

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

# HASSAN INSTITUTE OF MEDICAL SCIENCES, HASSAN

**(An Autonomous Institute under the Dept of Medical Education)**

**SRI CHAMARAJENDRA HOSPITAL CAMPUS, HASSAN-573201**

**Website: www.hims-hassan.org, Phone/Fax No.08172-231699,**

## 5ನೇ ಆರ್ಥಿಕ ಸಮಿತಿ ಸಭೆಯ ನಡವಳಿಗಳು

ದಿನಾಂಕ: 22-02-2011, ಮಂಗಳವಾರ

ಸ್ಥಳ:

ಕೊಠಡಿ ಸಂಖ್ಯೆ:341, 3ನೇ ಮಹಡಿ,

ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ,

ವಿಧಾನ ಸೌಧ, ಬೆಂಗಳೂರು

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಐದನೇ ಆರ್ಥಿಕ ಸಮಿತಿ ಸಭೆ ನಡಾವಳಿಗಳು

ದಿನಾಂಕ: 22-02-2011ನೇ ಮಂಗಳವಾರ ಮಧ್ಯಹ್ನ 4-00 ಗಂಟೆಗೆ ಗೌರವಾನ್ವಿತ ಪ್ರಧಾನ ಕಾರ್ಯದರ್ಶಿಗಳು (ವೈದ್ಯಕೀಯ ಶಿಕ್ಷಣ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ: 341, ವಿಧಾನ ಸೌಧ, ಬೆಂಗಳೂರು ಇಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಐದನೇ ಆರ್ಥಿಕ ಸಮಿತಿ ಸಭೆ ಸೇರಿ ನಡೆಸಿದ ಸಭಾ ನಡುವಳಿಗಳು.

## ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಐದನೇ ಆರ್ಥಿಕ ಸಮಿತಿ ಸಭಾ ನಡವಳಿಗಳು

| | | |
|---|---|---|
| 01 | ಶ್ರೀ. ಐ.ಎಂ. ವಿಠಲಮೂರ್ತಿ, ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಧಾನಸೌಧ, ಬೆಂಗಳೂರು. | ಅಧ್ಯಕ್ಷರು |
| 02 | ಶ್ರೀ. ಗುಪ್ತ,(ಉಪ ಕಾರ್ಯದರ್ಶಿಗಳು), ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಪರವಾಗಿ. | ಸದಸ್ಯರು |
| 03 | ಶ್ರೀ. ಪನಾಲಿ, (ಮುಖ್ಯ ಆಡಳಿತಾಧಿಕಾರಿಗಳು), ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು ರವರ ಪರವಾಗಿ. | ಸದಸ್ಯರು |
| 04 | ಶ್ರೀ. ಆರ್. ಎಸ್. ಪ್ರಸಾದ್, ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು |
| 05 | ಶ್ರೀ.ಭಾಷಾ,(ಉಪ ಕಾರ್ಯದರ್ಶಿಗಳು), ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಪರವಾಗಿ | ಸದಸ್ಯರು |
| 06 | ಉಪಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು. | ಸದಸ್ಯರು |
| 07 | ಶ್ರೀನಿವಾಸ ಗೌಡ, ಆರ್ಥಿಕ ಸಲಹೆಗಾರರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು ಕಾರ್ಯದರ್ಶಿಗಳು |

| ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 01 | ಸಭಾ ಆಹ್ವಾನ ಪತ್ರವನ್ನು ಓದಿ ರೆಕಾರ್ಡ್ ಮಾಡುವುದು. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆರ್ಥಿಕ ಅಧಿಕಾರಿಗಳು ಮತ್ತು ಸದಸ್ಯ ಕಾರ್ಯದರ್ಶಿಯವರಾದ ಶ್ರೀನಿವಾಸಗೌಡರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳನ್ನೂ ಸಭೆಗೆ ಆಹ್ವಾನಿಸಿ ನಂತರ ಸಭಾ ಆಹ್ವಾನ ಪತ್ರವನ್ನು ಓದಿ ರೆಕಾರ್ಡ್ ಮಾಡಲಾಯಿತು. |
| 02 | ದಿನಾಂಕ: 13-07-2009 ರಂದು ನಡೆದ 4ನೇ ಆರ್ಥಿಕ ಸಭೆಯ ನಡವಳಿಗಳ ಬಗ್ಗೆ ತೆಗೆದುಕೊಂಡ ಕ್ರಮದ ಅನುಪಾಲನಾ ವರದಿಯನ್ನು ಓದಿ ಅಂಗೀಕರಿಸುವುದು. | ದಿನಾಂಕ: 13-07-2009 ರಂದು ನಡೆದ 4ನೇ ಆರ್ಥಿಕ ಸಮಿತಿ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಅನುಪಾಲನಾ ವರದಿಯನ್ನು ಓದಿ ಅಂಗೀಕರಿಸಲಾಯಿತು. |
| 03 | ಸಂಸ್ಥೆಯ ನೂತನ ಆಸ್ಪತ್ರೆಗೆ ಅವಶ್ಯಕ ವಿರುವ 10.5 ಕೋಟಿ ಮೊತ್ತದ ಉಪಕರಣ ಮತ್ತು ಪೀಠೋಪಕರಣಗಳ ಖರೀದಿಗೆ ನಾಲ್ಕನೇ ಆರ್ಥಿಕ ಸಮಿತಿ ಮತ್ತು 8ನೇ ಆಡಳಿತ ಮಂಡಳಿಯ ಅನುಮೋದನೆ ಪಡೆದು ದಿನಾಂಕ:24-02-2010 ರಂದು ಕರೆದಿದ್ದ ಟೆಂಡರನ್ನು ರದ್ದುಪಡಿಸುವ ಬಗ್ಗೆ.<br>ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇದರ ವ್ಯಾಪ್ತಿಗೆ ಒಳಪಡುವ ನೂತನ ಹೈಟೆಕ್ ಆಸ್ಪತ್ರೆಯನ್ನು ಅಗತ್ಯವಿರುವ ಉಪಕರಣ ಮತ್ತು ಪೀಠೋಪಕರಣಗಳ ಖರೀದಿಗಾಗಿ ರೂ. 1050 ಲಕ್ಷ ರೂ.ಗಳ ಮೌಲ್ಯದ ಟೆಂಡರ್ ಕರೆಯಲು 8ನೇ ಆಡಳಿತ ಮಂಡಳಿ ಮತ್ತು 3ನೇ ಆಡಳಿತ ಮಂಡಳಿ ಸಭೆಯಲ್ಲಿ ಟೆಂಡರ್ ಕರೆದು ಖರೀದಿಸಲು ಅನುಮೋದನೆ ಪಡೆಯಲಾಗಿತ್ತು. ಅದರಂತೆ ದಿನಾಂಕ: 24.02.2010 ರಂದು ನಿಯಮಾನುಸಾರ ಟೆಂಡರ್ ಕರೆಯಲಾಗಿತ್ತು. ವಿವಿಧ ಟೆಂಡರ್‌ದಾರರ ತಾಂತ್ರಿಕ ಬಿಡ್‌ಗಳನ್ನು ತೆರೆದು ಮೌಲ್ಯ ಮಾಪನ ಮಾಡಲಾಗಿತ್ತು. ಈ ಮಧ್ಯೆ ಬೋಧಕೇತರ ಸಿಬ್ಬಂದಿ ನೇಮಕಾತಿ ವಿವಾದದಿಂದ ಬೋಧಕ ಸಿಬ್ಬಂದಿ ಬಿಡುಗಡೆ, ಮುಷ್ಕರ ಇತ್ಯಾದಿ ಕಾರಣಗಳಿಂದ ಟೆಂಡರ್ ಪ್ರಕ್ರಿಯೆಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಸಾಧ್ಯವಾಗದ್ದರಿಂದ ಸದರಿ ಟೆಂಡರ್‌ಗಳನ್ನು ರದ್ದುಪಡಿಸಿರುತ್ತೆ. ಈ ಬಗ್ಗೆ ಅನುಮೋದನೆಗೆ ಸಲ್ಲಿಸಿದೆ. | ದಿನಾಂಕ:24-02-2011 ರಂದು 8ನೇ ಆಡಳಿತ ಮಂಡಳಿಯ ಅನುಮೋದನೆ ಮೇರೆಗೆ ಸಂಸ್ಥೆಯ ನೂತನ ಆಸ್ಪತ್ರೆಗೆ ಅವಶ್ಯವಿರುವ ರೂ. 10.5 ಕೋಟಿ ಮೊತ್ತದ ಉಪಕರಣ ಮತ್ತು ಪೀಠೋಪಕರಣಗಳ ಖರೀದಿಗೆ ಕರೆದಿದ್ದ ಟೆಂಡರ್ ಪ್ರಕ್ರಿಯೆಯಲ್ಲಿ ತಾಂತ್ರಿಕ ಬಿಡ್‌ಗಳನ್ನು ತೆರೆದು ಮೌಲ್ಯ ಮಾಪನ ಮಾಡಲಾಗಿತ್ತು. ಆದರೆ ಅನಿವಾರ್ಯ ಕಾರಣಗಳಿಂದ ಆರ್ಥಿಕ ಬಿಡ್ ತೆರೆದು KTPP Act 2000 ನಿಯಮಾನುಸಾರ ನಿಗದಿತ ಅವಧಿಯೊಳಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ. ಆದ್ದರಿಂದ ಸದರಿ ಟೆಂಡರ್ ಪ್ರಕ್ರಿಯೆಯನ್ನು ರದ್ದುಗೊಳಿಸಿ ಹೊಸ ಟೆಂಡರ್ ಅನ್ನು ನಿಯಮಾನುಸಾರ ಕರೆಯಲು ಸಭೆಯು ಅನುಮೋದನೆ ನೀಡಿತು. |

3/3/14

04

ಸಂಸ್ಥೆಯ ಬೋಧಕ ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಸಂಬಂಧಿಸಿದಂತೆ ತುರ್ತು ಅವಶ್ಯಕತೆ ಇರುವ ಉಪಕರಣಗಳನ್ನು ಅಂದಾಜು ರೂ. 6.66 ಕೋಟಿ ಮೊತ್ತದಲ್ಲಿ ಟೆಂಡರ್ ಕರೆಯುವ ಬಗ್ಗೆ.

ದಿನಾಂಕ: 24-01-2011 ರಂದು ಸಂಸ್ಥೆಯ ಟೆಂಡರ್ ಸಮಿತಿಯ ಸಭೆ ಕರೆದು ವಿವಿಧ ವಿಭಾಗಗಳ ಮುಖ್ಯಸ್ಥರೊಡನೆ ಚರ್ಚಿಸಲಾಗಿದೆ. ಚರ್ಚೆಯ ಅನ್ವಯ ತುರ್ತಾಗಿ ಸಂಸ್ಥೆಯ ಶಸ್ತ್ರ ಚಿಕಿತ್ಸಾ ವಿಭಾಗ, ಅರವಳಿಕೆ ವಿಭಾಗ, ನೇತ್ರ ವಿಭಾಗ ಮತ್ತು ವೈದ್ಯಶಾಸ್ತ್ರ ವಿಭಾಗಗಳಿಗೆ ಅತ್ಯಾವಶ್ಯಕವಾಗಿ ಬೇಕಾದ ಉಪಕರಣ ಮತ್ತು ಪೀಠೋಪಕರಣಗಳನ್ನು ಅಂದಾಜು ಮೊತ್ತ 666.01 ಲಕ್ಷಗಳನ್ನು ಖರೀದಿಸಲು ತೀರ್ಮಾನಿಸಲಾಗಿದೆ. ವಿವಿರ ಕೆಳಕಂಡಂತಿರುತ್ತದೆ. ಸದರಿ ಖರೀದಿಗೆ 2010-11ನೇ ಸಾಲಿನ ಆಯವ್ಯಯದಲ್ಲಿ 4210 ಲೆಕ್ಕ ಶೀರ್ಷಿಕೆಯಡಿ 6.96 ಕೋಟಿ ಅನುದಾನ ಲಭ್ಯವಿರುತ್ತದೆ.

ಸಂಸ್ಥೆಯ ವಿವಿಧ ವಿಭಾಗಗಳಿಗೆ ಅತ್ಯವಶ್ಯಕವಾಗಿ ಬೇಕಾಗಿರುವ ಉಪಕರಣಗಳನ್ನು ಅಂದಾಜು ಮೊತ್ತ ರೂ. 6.66 ಕೋಟಿಗ ಳಲ್ಲಿ ಖರೀದಿಸಲು ಟೆಂಡರ್ ಕರೆಯಲು ಚರ್ಚಿಸಲಾಯಿತು. ಉಪಕರಣ ಗಳ ಅವಶ್ಯಕತೆಯ ಬಗ್ಗೆ ವಿವಿಧ ವಿಭಾಗಗಳ ಮುಖ್ಯಸ್ಥರಿಂದ ಸಲ್ಲಿಸಲಾಗಿದ್ದ ಕೋರಿಕೆಯನ್ನು ಚರ್ಚಿಸಿ ಸಮಿತಿಯ ಅವಶ್ಯಕ specification ಹೊಂದಿರುವ ಮತ್ತು ಮಾರುಕಟ್ಟೆಯಲ್ಲಿ ಪ್ರಸಿದ್ಧವಾದ ಕಂಪನಿಯ ಉಪಕರಣಗಳನ್ನು ರೂ. 6.66 ಕೋಟಿ ಮೊತ್ತದಲ್ಲಿ ನಿಯಮಾನುಸಾರ ಟೆಂಡರ್ ಕರೆದು ಖರೀದಿಸಲು ತೀರ್ಮಾನಿಸಲಾಯಿತು.

| Sl. No. | Department | Equipment and apparatus | Quantity | Amount (Approximate Value Rs. in lakhs) | Total Amount required (Rs. in lakhs) |
|---|---|---|---|---|---|
| 01 | Anaesthesiology | Anaesthesia Works Station | No. 6 | 10.00 (each) | 60.00 |
| | | Ventilator for ICU. | No. 10 | 18.00 (each) | 180.00 |
| | | Multipara Monitors | No. 40 | 0 3.5 (each) | 1140.00 |
| | | Fiber optic laryngoscope | No. 01 | 07.00 (each) | 07.00 |
| | | Cardiac defibrillator with ECG monitor Biphasic | No. 05 | 04.00 (each) | 20.00 |
| 02 | General Surgery | Laproscopic Instruments | No. 2 | 30.00 (each) | 60.00 |
| | | Cystescope & Resectoscope | No. 1 | 15.00 (each) | 15.00 |

| | | | | | |
|---|---|---|---|---|---|
| 03 | General Medicine | 2-D Echocardiogram Machine (higher end) | No. 1 | 22.00 each) | 22.00 |
| | | TMT machine | No. 1 | 10.00 (each) | 10.00 |
| | | Computerised spirometer | No. 1 | 02.00 (each) | 2.00 |
| 04 | Radiology | C.T. Scaner | No. 1 | 120.00 (each) | 120.00 |
| 05 | Ophthalmology | Phacoemulsification unit | No. 1 | 15.00 (each) | 15.00 |
| | | Automated perimeter | No. 1 | 10.00 (each) | 10.00 |
| | | Motorised surgeon chair | No. 3 | 00.40 (each) | 1.2 |
| | | Eye O.T. Table | No. 3 | 00.80 (each) | 2.4 |
| | | Indirect Ophthalmoscope (L.E.D) | No. 3 | 00.50 (each) | 1.5 |
| | | | **Total** | **243.70 lakh** | **666.01** |

ಸದರಿ ಉಪಕರಣಗಳ ಖರೀದಿಗೆ ಟೆಂಡರ್ ಕರೆಯಲು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ.

3/3/11

05

ಸಂಸ್ಥೆಯ ಬೋಧಕ ಆಸ್ಪತ್ರೆ ಮತ್ತು ಕಾಲೇಜು ವ್ಯಾಪ್ತಿಯ ಸ್ವಚ್ಛತೆ ಮತ್ತು ಭದ್ರತಾ ಸಿಬ್ಬಂದಿಗಳ ಸೇವೆಯನ್ನು 2011-12ನೇ ಸಾಲಿಗೆ ಹೊರಗುತ್ತಿಗೆ ಆಧಾರದಲ್ಲಿ ಪಡೆಯಲು ಟೆಂಡರ್ ಕರೆಯುವ ಬಗ್ಗೆ.

ಸಂಸ್ಥೆಯ ಬೋಧಕ ಆಸ್ಪತ್ರೆ ಮತ್ತು ಕಾಲೇಜು ವ್ಯಾಪ್ತಿಯ ಸ್ವಚ್ಛತೆ ಮತ್ತು ಭದ್ರತಾ ಸಿಬ್ಬಂದಿಗಳ ಹೊರಗುತ್ತಿಗೆ ಸೇವಾ ಅವಧಿ ಏಪ್ರಿಲ್ 30ಕ್ಕೆ ಅಂತ್ಯಗೊಳ್ಳಲಿದ್ದು, 2011-12ನೇ ಸಾಲಿನ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಟೆಂಡರ್ ಕರೆಯಬೇಕಾಗಿದೆ. ಸೇವೆಗಳ ವಿವಿರ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ಸಿಬ್ಬಂದಿ ವಿವರ | ಸಂಖ್ಯೆ | ಕಾರ್ಮಿಕ ಕಾಯ್ದೆಅಡಿ ಕನಿಷ್ಠ ಮಾಸಿಕ ವೇತನ | ಒಟ್ಟು ತಿಂಗಳ ವೇತನ | ಒಟ್ಟು ವಾರ್ಷಿಕ ವೇತನ |
|---|---|---|---|---|---|
| 1 | ಭದ್ರತಾ ಸಿಬ್ಬಂದಿ | 65 | ರೂ. 3692.00 | ರೂ. 240000.00 | ರೂ. 2880000.00 |
| 2 | ಅನುರಿತಸ್ವಚ್ಛತಾ ಕಾರ್ಮಿಕರು | 150 | ರೂ. 3446.30 | ರೂ. 517000.00 | ರೂ. 6203340.00 |
| 3 | ಮೇಲ್ವಿಚಾರಕರು | 30 | ರೂ. 4023.30 | ರೂ. 120700.00 | ರೂ. 1448400.00 |

**ಅಂದಾಜು ವೆಚ್ಚ:**

| | |
|---|---|
| ಒಟ್ಟು ವಾರ್ಷಿಕ ವೇತನದ ಖರ್ಚು | ರೂ. 10531740.00 |
| ಸೇವಾ ತೆರಿಗೆ 10.3% | ರೂ. 1084770.00 |
| ಸೇವಾ ವೆಚ್ಚ 10% | ರೂ. 1053174.00 |
| ಒಟ್ಟು ವಾರ್ಷಿಕ ವೆಚ್ಚ | **ರೂ. 13722858.00** |

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕಅಧಿ ನಿಯಮದಡಿ ನಿಯಮ 17 ಉಪ ನಿಯಮ 11(ಎ) ರಂತೆ 2ಕೋಟಿ ಮೊತ್ತದ ವರೆಗಿನ ಟೆಂಡರ್ ಅವದಿ 30 ದಿನಗಳಾಗಿದ್ದು, ಸದರಿ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಅನುಮತಿ ನೀಡಬೇಕಾಗಿ ಕೋರಿದೆ. ಸದರಿ ಟೆಂಡರ್ ಗೆ ಅನುಮೋದನೆ ನೀಡಲು ಸಭೆಗೆ ಮಂಡಿಸಿದೆ.

ಸಂಸ್ಥೆಯ ಬೋಧಕ ಆಸ್ಪತ್ರೆ ಮತ್ತು ಕಾಲೇಜು ವ್ಯಾಪ್ತಿಯ ಸ್ವಚ್ಛತೆ ಮತ್ತು ಭದ್ರತಾ ಸಿಬ್ಬಂದಿಗಳ ಸೇವೆಯನ್ನು 2011-12ನೇ ಸಾಲಿಗೆ ಹೊರಗುತ್ತಿಗೆ ಆಧಾರದಲ್ಲಿ ಸರ್ಕಾರದಿಂದ ಮಂಜೂರಾಗಿ ಖಾಲಿ ಇರುವ ಡಿ ಗ್ರೂಪ್ ಮತ್ತು ಸ್ವೀಪರ್‌ಗಳ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ಹಾಗೂ ಅವಶ್ಯಕವಿರುವ ಭದ್ರತಾ ಸಿಬ್ಬಂದಿಗಳನ್ನು ಒಂದು ವರ್ಷ ಅವಧಿಗೆ ನಿಯಮಾನುಸಾರ ಟೆಂಡರ್ ಕರೆದು ಏಜೆನ್ಸಿ ಮೂಲಕ ಸೇವೆ ಪಡೆಯಲು ಅನುಮೋದನೆ ನೀಡಲಾಯಿತು.

PSPrasad

| | | |
|---|---|---|
| 06 | ಸಂಸ್ಥೆಯ ಅಧೀನದಲ್ಲಿ ಬರುವ ಕ್ಯಾಂಟೀನ್ ವ್ಯವಸ್ಥೆಗೆ 2010-11ನೇ ಸಾಲಿಗೆ ಟೆಂಡರ್ ಕರೆಯುವ ಬಗ್ಗೆ.<br>ಸಂಸ್ಥೆಯ ಕಾಲೇಜು ವ್ಯಾಪ್ತಿಯಲ್ಲಿರುವ ಉಪಹಾರ ಮಂದಿರವನ್ನು 05-02-2008 ರಿಂದ ಮೂರು ವರ್ಷದ ಅವಧಿಗೆ ಮಾಸಿಕ ರೂ. 5000/-ಗಳಂತೆ ಬಾಡಿಗೆಗೆ ಕೊಡಲಾಗಿತ್ತು. ಸದರಿ ಅವಧಿ ಪೂರ್ಣಗೊಂಡಿರುವುದರಿಂದ 2011-12ನೇ ಸಾಲಿಗೆ ಕ್ಯಾಂಟೀನ್ ನಡೆಸಲು ಟೆಂಡರ್ ಕರೆಯಲು ಸಭೆಯ ಅನುಮೋದನೆಗೆ ಮಂಡಿಸಿದೆ. | ಸಂಸ್ಥೆಯ ಅಧೀನದಲ್ಲಿ ಬರುವ ಕ್ಯಾಂಟೀನ್ ವ್ಯವಸ್ಥೆಗೆ 2011-12ನೇ ಸಾಲಿಗೆ ಟೆಂಡರ್ ಕರೆದು ಕ್ಯಾಂಟೀನ್ ನಡೆಸಲು ಅನುಮೋದನೆ ನೀಡಲಾಯಿತು. |

**(ಶ್ರೀನಿವಾಸಗೌಡ),**
ಆರ್ಥಿಕ ಅಧಿಕಾರಿಗಳು ಹಾಗೂ
ಸದಸ್ಯ ಕಾರ್ಯದರ್ಶಿ, ಆರ್ಥಿಕ ಸಮಿತಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.

**(ಡಾ. ಆರ್.ಎಸ್. ಪ್ರಸಾದ್),**
ಸದಸ್ಯರು, ಆರ್ಥಿಕ ಸಮಿತಿ ಹಾಗೂ
ನಿರ್ದೇಶಕರು,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.

**(ಶ್ರೀ. ಐ.ಎಂ. ವಿಠಲ ಮೂರ್ತಿ),**
ಅಧ್ಯಕ್ಷರು, ಆರ್ಥಿಕ ಸಮಿತಿ, ಹಿಮ್ಸ್ ಹಾಗೂ
ಪ್ರಧಾನ ಕಾರ್ಯದರ್ಶಿಗಳು, (ವೈದ್ಯಕೀಯ ಶಿಕ್ಷಣ),
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವಿಧಾನಸೌದ, ಬೆಂಗಳೂರು.